ಟುರ್ರಾ ಟುರ್ರಾ ಪ್ರೈವೇಟ್ ಚಾಟ್ ರೂಮಲ್ಲಿ ಕರುಣಾಕರರ ಜತೆ ಈ ಬಾಲಕರ ಕುರಿತಾದ ಮಾತುಕತೆಯಲ್ಲಿ ಪಾಲ್ಗೊಳ್ಳುತ್ತಿದ್ದ ಸದಸ್ಯರೆಲ್ಲ ಬಹುಶಃ ಬೇರೆ ಬೇರೆ ದೇಶಗಳಲ್ಲಿರೋ ಶ್ರೀಮಂತ ಗುಪ್ತ ಶಿಶುಕಾಮಿಗಳ ಪಂಗಡದವರೂ, ಹಾಗೇ ಆ ಪಂಗಡಕ್ಕೆ ಭಾರತದ ರೆಪ್ರೆಸೆಂಟೇಟಿವ್ ಈ ಪ್ರೊಫೆಸರ್ರೇ ಅಂತ ಬಹಳ ಗಂಭೀರವಾದ ಆನ್‌ಲೈನ್ ಚರ್ಚಾಸ್ಪರ್ಧೆ ಬೇರೆ ಶುರುವಾಯಿತು. ಈ ಚರ್ಚೆಯ ಮಾತುಕತೆಯ ಕೊಂಡಿಯನ್ನು ತಮ್ಮ ತ್ರಿಬಲ್ ಎಕ್ಸ್ ಖಾತೆಯಲ್ಲಿ ಹಂಚಿಕೊಂಡ ರಾಜಕಾರಣಿಯೊಬ್ಬರು 'ಈ ಪ್ರೊಫೆಸರ್ ಏಕೆ ರಷ್ಯನ್ ಸ್ಪೈ ಆಗಿರಬಾರದು... ಹೇಗಿದ್ದರೂ ಹೆಚ್ಚಾಗಿ ಅನಧಿಕೃತ ರಷ್ಯನ್ ವೆಬ್‌ಸೈಟುಗಳೇ ಮೈನರ್ ಹುಡುಗ ಹುಡುಗಿಯರ ಚಿತ್ರಗಳನ್ನು ಅಂತರ್ಜಾಲದಲ್ಲಿ ಅಪ್ಲೋಡ್ ಮಾಡೋದು' ಎಂದು ಹೊಸ ವಿವಾದಕ್ಕೆ ಕಿಡಿ ಹಚ್ಚಿದ್ದರು. ಇದನ್ನು ಗಮನಿಸಿದ ಸೋವಿಯಟ್ ಕೂಟದ ರಾಯಭಾರಿಯೊಬ್ಬರು 'ರಷ್ಯ, ಕೆ.ಜಿ.ಬಿ ಕಾಲ ಎಂದೋ ಮುಗಿದಿದೆ. ಕಮ್ಯುನಿಸ್ಟರ ಮೇಲೆ ಗೂಬೆ ಕೂರಿಸುತ್ತಾ ಅಮೆರಿಕದವರು ಗುಪ್ತವಾಗಿ ತಮ್ಮ ಫ್ಯಾಸಿಸ್ಟ್ ಸಿದ್ಧಾಂತವನ್ನು ಹೇಗೆಲ್ಲ ಹಬ್ಬಿಸಿದ್ದಾರೆ ಅನ್ನೋದಕ್ಕೆ ಶೀತಲ ಸಮರ ಹಾಗೂ ಮೆಕಾರ್ತಿ ಯುಗವೇ ಸಣ್ಣ ಸಾಕ್ಷಿ... ಎಷ್ಟೆಲ್ಲ ಬನಾನ ರಿಪಬ್ಲಿಕ್ ದೇಶಗಳನ್ನು ಈ ಸೋ ಕಾಲ್ಡ್ ಪ್ರಜಾಪ್ರಭುತ್ವ ರಾಷ್ಟ್ರದ ಕಾವಲು ಪಡೆ ಸಿ.ಐ.ಎ ಉರುಳಿಸಿಲ್ಲ...? ಆ ಪ್ರೊಫೆಸರ್ ಸಿ.ಐ.ಎ ಏಜೆಂಟ್ ಆಗಿರಲಿಕ್ಕೂ ಸಾಕು...' ಎಂದರು. ಹಿರಿಯಣ್ಣ ಅಮೆರಿಕೆಗೆ ಅವಮಾನವಾಗಬಾರದು ಎಂಬ ಉದ್ದೇಶದಿಂದ ನಮ್ಮವರದೇ ಆದ ಇನ್ನೊಬ್ಬ ರಾಯಭಾರಿ 'ಹತ್ಯಾಕಾಂಡಗಳೆಲ್ಲ ಆದದ್ದು ಹಿಟ್ಲರ್, ಸ್ಟಾಲಿನ್ನಿಂದ... ಹಾಗೇ ಸಿ.ಐ.ಎ ಏಜೆಂಟುಗಳ್ಯಾರೂ ಶಿಶುಕಾಮಿಗಳಲ್ಲ' ಅಂತೇನೋ ಹೇಳಲು ಬಂದಾಗ, ಮಗದೋರ್ವ ಹಿರಿಯ ಭಾರತೀಯ ಮುತ್ಸದ್ದಿ 'ಓಹೋ ಅಮೆರಿಕ ಏಜೆಂಟುಗಳೆಲ್ಲ ಏನು ಭಾರೀ ಶುದ್ಧರೇ?! ಜೆ. ಎಡ್ಗರ್ ಹಾಗಾದ್ರೇ ಏನು ಗೆಣಸು ತಿನ್ನುತ್ತಾ ಕೂತಿದ್ದ ಮುಗ್ಧ ಬಾಲಕನೇ...' ಎಂದು ಚಾಟಿ ಏಟು ಬೀಸಿದರು. ಆಗ ಇನ್ನೊಬ್ಬ ತಲೆಹರಟೆ ಯುವ ಶಿಕ್ಷಕ, ಏನೋ ತಾನೊಬ್ಬ ಮಾತ್ರ ಬುದ್ಧಿವಂತ ಅನ್ನುವಂತೆ 'no... no... Edgar was the founder of FBI, he has nothing to do with C.I.A get your facts right' ಅಂತ ಅಭಿಪ್ರಾಯ ಮಂಡಿಸಿದ್ದ.

ಹೀಗೆ ವಾದ-ವಿವಾದ ಸರಣಿಗಳು, ಒಂದು ಕಡೆ ಹೊಡೆದ ಕ್ರಿಕೆಟ್ ಚೆಂಡು ಮತ್ತೊಂದು ಕಡೆ ಎಲ್ಲೋ ಹಾರುವಂತೆ ಎಲ್ಲೆಲ್ಲೋ ಚಿಮ್ಮುತ್ತಾ ಇದ್ದಾಗ ಒಂದಿಬ್ಬರು, ಪ್ರೊಫೆಸರ್ ಓರ್ವ ಗುಪ್ತ ಹೋಮೋ ಸೆಕ್ಷುವಲ್. ಅದಕ್ಕೇ ಈತ ಹೀಗೆ ಅನ್ನೋ ಸುದ್ದಿ ಹಬ್ಬಿಸಿದ್ದರು. ಆಗ ಅನೇಕ ಲಿಬರಲ್ ಆಕ್ಟಿವಿಸ್ಟ್‌ಗಳು, ಮತ್ತು ಮುಕ್ತವಾಗಿ ಗೇ, ಹೋಮೋ ಸೆಕ್ಸುವಲ್ ಹಾಗೂ ಟ್ರಾನ್ಸ್ ಜೆಂಡರ್‌ಗಳಾಗಿ ಬದುಕುತ್ತಾ ಇರುವವರು, 'ಒಬ್ಬ ವಿಕೃತನನ್ನು, ಸಹಜವಾಗಿ ಮುಕ್ತವಾಗಿ ಬದುಕುತ್ತಾ ಇರೋ ನಮ್ಮ ಜತೆ ಹೋಲಿಸೋದು ಈ ಸಮಾಜಕ್ಕೆ ಈ ಶತಮಾನದಲ್ಲೂ ಹಿಡಿದಿರೋ ಮೌಢ್ಯವನ್ನು ತೋರಿಸುತ್ತದೆ. ಪ್ರಕೃತಿ ಎಂದೂ ತಾರತಮ್ಯ ಮಾಡಿ ಗಂಡಿಗೆ ಹೆಣ್ಣು ಹೆಣ್ಣಿಗೆ ಗಂಡು ಅದೇ ಸ್ವಾಭಾವಿಕ ಅಂತ ಸಾರಿಲ್ಲ. ಹಾಗೇ ಇಡೀ ಸಮಾಜದ ಬ್ರೈನ್ ವಾಶ್ ಮಾಡುತ್ತಾ ಇರುವುದು ಇದೇ ಮೂಲಭೂತವಾದಿಗಳು. ಅಂತಹ ಅಸ್ವಸ್ಥ ಸೋ ಕಾಲ್ಡ್ ನಾರ್ಮಲ್ ವ್ಯಕ್ತಿಗಳಿಗಿರುವ ಅಸಹ್ಯ ಮನಸ್ಥಿತಿ... ನಮ್ಮಂತವರೆಂದರೆ ಹೀಗೆ ಅನ್ನೋ ಕೀಳು ಮಟ್ಟದ ಮಾತನಾಡಲು ಪ್ರೇರೇಪಿಸುತ್ತಿದೆ... ನಿಜವಾದ ಸೀರಿಯಲ್ ಕಿಲ್ಲರ್ ನೀವುಗಳು... ಇಂತಹ ಮುಖವಾಡದವರು. ಮದ್ವೆ ಆದ ಆ ಹೆಟ್ರೋ ಸೆಕ್ಸುವಲ್ ಮುದುಕ, ಎರಡು ಮಕ್ಕಳು ಮಾಡಿ, ಪರದೆಯ ಮರೆಯಲ್ಲಿ ಹೀಗೆಲ್ಲ ಅವಾಂತರ ಮಾಡಿರೋದೇ ಇದಕ್ಕೆ ಸಾಕ್ಷಿ... ನೀವೇನು ನಾರ್ಮಲ್ ಅಂತ ಭಾವಿಸಿದ್ದಿರೋ ಅದೇ ಅಬ್ ನಾರ್ಮಲ್...' ಅಂತ ಘೋಷಿಸಿ #normalisethenewabnormal ಅನ್ನೋ ಸಾಲನ್ನು ಫೇಮಸ್ ಮಾಡಿದರು; ಈ ಸಾಲು ಎಷ್ಟು ಫೇಮಸ್ ಆಯಿತು ಅಂದರೆ ನಮ್ಮ ಕಾಲದ Gen Z aka Genration z ಮಕ್ಕಳು ಇದನ್ನ ತಮ್ಮ ಘೋಷ ವಾಕ್ಯ ಮಾಡಿಕೊಂಡು ಅದೇ ಸಾಲಿರುವ ಟೀ ಶರ್ಟ್, ಜೀನ್ಸ್ ಹಾಕಿ ಭಾನುವಾರದಂದು ಬೃಹತ್ ಮ್ಯಾರಥನ್ ಜಾಥಾ ಕೈಗೊಂಡ ಪರಿಣಾಮದಿಂದ ಮಹಾನಗರದ ಟ್ರಾಫಿಕ್ ವ್ಯವಸ್ಥೆ ಸಂಪೂರ್ಣ ಹದಗೆಟ್ಟು ಮನೆಗೆ ಹಿಂದಿರುಗಲಿದ್ದ ಕೂಲಿ ಕಾರ್ಮಿಕರೆಲ್ಲ ಹೊಟ್ಟೆಗೂ ತಿನ್ನಲು ಏನೂ ಇಲ್ಲದೆ ಬಸ್ ಸ್ಟಾಂಡಲ್ಲೇ ಮಲಗೋ ಪ್ರಸಂಗ ಎದುರಾಯಿತು.

ಇನ್ನೂ ಈ ಬದಿಯ ಜನತೆಗೆ ಪ್ರೊಫೆಸರ್ ಹೊರಗೆ ಜೀವಂತವಾಗಿ ಇದ್ದರೆ ಈ ದೇಶವೇ